**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020

ಪಿಡಬ್ಲುು : 14 ಸಿಡಬ್ಲುು : 16

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಕಲ್ಲಪ್ಪ ದೇಸಾಯಿ |
| ತಂದೆಯ ಹೆಸರು | : | ಶ್ರೀ. ವಿರೂಪಾಕ್ಷಿ ದೇಸಾಯಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಬಸರಕೋಡ |
| ದಿನಾಂಕ | : | 02-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮೃತ ಬಸವರಾಜ ನಮ್ಮ ಊರಿನವರು, ನನಗೆ ಗೊತ್ತಿರುತ್ತಾರೆ. ಅವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದರು. ಮೂರು ಜನ ಆರೋಪಿತರು ನಮ್ಮ ಊರಿನವರು. ಚಾಸಾಃ 18 ಹಸನಸಾಬ ಅಂಬಲಗಡಿ ಮತ್ತು ಚಾಸಾಃ 19 ಬಸವರಾಜ ಎಮ್ಮಿ ನನಗೆ ಗೊತ್ತಿರುತ್ತಾರೆ.

2. ಊರಿನ ಅಗಸಿ [ಮುಖ್ಯದ್ವಾರ] ಯಲ್ಲಿ ನಮ್ಮ ಮನೆ ಇದೆ. ನಮ್ಮ ಮನೆಯಿಂದ 500 ಮೀಟರ ದೂರದಲ್ಲಿ ಆರೋಪಿತರ ಮನೆ ಇದೆ.

3. ಮೃತ ಬಸವರಾಜ ಮತ್ತು ಆರೋಪಿತರ ನಡುವೆ ತಂಟೆ ಇದ್ದ ವಿಚಾರ ನನಗೆ ಗೊತ್ತಿರುವುದಿಲ್ಲ. ಬಸವರಾಜ ಅವರು ತೀರಿಕೊಂಡಿದ್ದ ವಿಚಾರ ನನಗೆ ಗೊತ್ತಿರುತ್ತದೆ. ಈಗ 4-5 ವರ್ಷಗಳ ಹಿಂದೆ ಅವರು ತೀರಿಕೊಂಡಿರುತ್ತಾರೆ. ಕರೆಮ್ಮ ಗುಡಿ ಹತ್ತಿರ ಬಸವರಾಜ

ಅವರು ಆರಾಮ ಇಲ್ಲದೇ ಬಿದ್ದು ಹೋಗಿದ್ದು, ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆತ ತೀರಿಕೊಂಡಿದ್ದಾನೆ ಎಂದು ಗೊತ್ತಾಯಿತು. ಅಷ್ಟು ಬಿಟ್ಟು ಬಸವರಾಜ ಅವರ ಸಾವಿನ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ. ಬಸವರಾಜ ಅವರ ಸಾವಿನ ವಿಚಾರವಾಗಿ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

" ನಮ್ಮ ಮನೆ ಮತ್ತು 1ನೇ ಆರೋಪಿಯವರ ಮನೆ ಒಂದೇ ಓಣಿಯಲ್ಲಿದೆ ಎನ್ನುವುದು ಸರಿಯಲ್ಲ, ಬಸವರಾಜ ಕಳೆದ ಮೂರು ವರ್ಷಗಳ ಹಿಂದೆ ನಮ್ಮೂರ ಮಹಾಂತೇಶ ಕಲ್ಲಪ್ಪ ಪಾಗದ ಇವನ ಹೆಂಡತಿ ನಾಗವ್ವ ಅಲಿಯಾಸ ನಾಗರತ್ನ ಪಾಗದ ಇವಳೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದರಿಂದ ಮಹಾಂತೇಶ ಪಾಗದ ಹಾಗೂ ಅವರ ಮನೆಯವರು ಬಸವರಾಜನೊಂದಿಗೆ ತಂಟೆ ಮಾಡಿ ಆತನ ಮೇಲೆ ಸಿಟ್ಟಾಗಿದ್ದರು ಆಗ ನಮ್ಮೂರ ಹಸನಸಾಬ ಅಬೂಬಕರ ಅಂಬಲಗಡಿ ಮತ್ತು ಬಸವರಾಜ ಮಲ್ಲಪ್ಪ ಎಮ್ಮಿ ಇವರು ಎರಡೂ ಪಾರ್ಟಿಯವರಿಗೆ ಬುದ್ಧಿ ಹೇಳಿ ತಂಟೆ ಬಗೆಹರಿಸಿದ್ದರಿಂದ ಬಸವರಾಜ ದೊಡಮನಿ ಇವನು ನಾಗವ್ವ ಇವಳ ಉಸಾಬರಿ ಮಾಡುವುದನ್ನು ಬಿಟ್ಟಿದ್ದನು, ಆದರೆ ಬಸವರಾಜ ದೊಡಮನಿ ಇವನು ಮಹಾಂತೇಶ ಪಾಗದ ಇವನ ಅಣ್ಣ ಗೋಪಾಲ ಕಲ್ಲಪ್ಪ ಪಾಗದ ಇವನ ಹೆಂಡತಿ ರೇಣುಕಾ ಪಾಗದ ಇವಳೊಂದಿಗೆ ಸಹ ಸಲುಗೆಯಿಂದ ಮಾತನಾಡುವುದು, ಸೆರೆ ಕುಡಿದು ಬಂದು ಅವರ ಮನೆಯ ಕಡೆ ಚೆರಾಡುವುದು ಮಾಡುವುದಲ್ಲದೇ, ಅವನು ರೇಣುಕಾ ಇವಳೊಂದಿಗೆ ಸಲುಗೆಯಿಂದ ಮಾತನಾಡಿಸುತ್ತಾ, ಅವಳ ಕೂಡ ಅಸಭ್ಯವಾಗಿ ವರ್ತಿಸುವುದು, ಮಾತನಾಡುತ್ತಿದ್ದನು ಮತ್ತು ಅವಳೊಂದಿಗೆ

ಮೊಬೈಲನಲ್ಲಿ ಮಾತನಾಡುತ್ತಿದ್ದನು, ಅವಳ ಮನೆಯ ಹಿತ್ತಲಿನಲ್ಲಿ ಬಂದು ಬಾಗಿಲು ಬಡೆಯುವುದು, ಕದ ಒದೆಯುವುದು ಮಾಡುತ್ತಿದ್ದನು, ಇದರಿಂದ ರೇಣುಕಾಳ ಗಂಡ ಗೋಪಾಲ ಪಾಗದ ಮತ್ತು ಅವನ ತಮ್ಮ ಮಹಾಂತೇಶ ಪಾಗದ ಇವರು ಬಸವರಾಜ ದೊಡಮನಿ ಇವನ ಮೇಲೆ ಸಿಟ್ಟಾಗಿ ತಂಟೆ ಮಾಡುತ್ತಿದ್ದರು." ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-67 ಎಂದು ಗುರುತಿಸಲಾಯಿತು.

2. " ದಿನಾಂಕಃ 03-03-2020 ರಂದು ಬೆಳಗಿನ ಜಾವ 1:30 ರ ಸುಮಾರಿಗೆ ನಾನು ಮನೆಯಲ್ಲಿ ಮಲಗಿಕೊಂಡಿದ್ದಾಗ ಗೋಪಾಲ ಪಾಗದ ಇವರ ಮನೆಯ ಕಡೆಗೆ ಬಸವರಾಜ ದೊಡಮನಿ ಇವನು ಚಿರಾಡುವ ಶಬ್ದ ಕೇಳಿಸಿತು, ನಮ್ಮೂರ ಬಸವರಾಜ ರುದ್ರಪ್ಪ ದೊಡಮನಿ ಇವನು, ರೇಣುಕಾ ಹಾಗೂ ಅವಳ ಗಂಡ ಗೋಪಾಲ ಹಾಗೂ ಮೈದುನ ಮಹಾಂತೇಶ ಇವರೊಂದಿಗೆ ಬಾಯಿ ಮಾಡುವ ಸಪ್ಪಳ ಕೇಳಿಸುತ್ತಿತ್ತು, ಆಗ ನಾನು ಆ ಕಡೆ ಹೋಗದೆ ಮಲಗಿಕೊಂಡೆನು, ಮರುದಿನ ಬೆಳಗ್ಗೆ ಎದ್ದು ನೋಡಲು ನಮ್ಮ ಮನೆಯ ಹತ್ತಿರ ಇರುವ ಗೋಪಾಲ ಪಾಗದ ಇವರ ಹಿತ್ತಲದಲ್ಲಿ ಬಸವರಾಜನು ಮಲಗಿಕೊಂಡ ಹಾಗೆ ಬಿದ್ದಿದ್ದನು, ಅವನಿಗೆ ತಲೆಗೆ , ಮುಖಕ್ಕೆ , ಕೈಕಾಲುಗಳಿಗೆ ಗಾಯ ಆಗಿ ಮುಖದ ಮೇಲೆ ರಕ್ತ ಸೊರಾಡುತ್ತಾ ಇತ್ತು, ಈ ವಿಷಯ ಅವರ ಮನೆಯ ಜನರಿಗೆ ಗೊತ್ತಾಗಿ , ಅವರ ಮನೆಯವರೆಲ್ಲರೂ ಬಂದು ಅಂಬ್ಯುಲೆನ್ಸನಲ್ಲಿ ಕಿತ್ತೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು." ಎಂದು ನಾನು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-68 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಮೃತ ಬಸವರಾಜ ಅವರನ್ನು ಅಂಬ್ಯುಲೆನ್ಸನಲ್ಲಿ ಕರೆದುಕೊಂಡು ಹೋಗಿದ್ದು ಸರಿ ಆದರೆ ಆತನಿಗೆ ಪೆಟ್ಟಾಗಿದ್ದಕ್ಕೆ ಕರೆದುಕೊಂಡು ಹೋಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ.

3. ಬಸವರಾಜ ಇತನನ್ನು ಚಿಕಿತ್ಸೆಗಾಗಿ ಧಾರವಾಡ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ತೀರಿಕೊಂಡಿದ್ದಾನೆ ಎಂದು ಗೊತ್ತಾಯಿತು ಎನ್ನುವುದು ಸರಿ. ಆ ನಂತರ ಮೃತ ಬಸವರಾಜನ ಹೆಂಡತಿ ಮೂರು ಜನ ಆರೋಪಿತರ ಮೇಲೆ ದೂರು ಕೊಟ್ಟಿರುತ್ತಾರೆ ಎನ್ನುವುದು ಸರಿ. ಆ ನಂತರ ಪೋಲಿಸರು ನನ್ನನ್ನು ವಿಚಾರಿಸಿದ್ದು, ನಾನು ನಿಪಿ–67 ಮತ್ತು ನಿಪಿ–68 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದು ಸತ್ಯ ಇದ್ದರೂ ಸಹ ಆರೋಪಿತರು ನಮ್ಮ ಊರಿನವರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.